ಓ.ಎಸ್ಃ 460 /2013

ಡಿ. ಡಬ್ಲ್ಯೂ ಃ 01

**ಸಾಕ್ಷಿಗೆ ದಿನಾಂಕ 23.01.2019 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ಶ್ರೀ NKS ವಕೀಲರಿಂದ**

ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಗೊತ್ತು. ವಾದಿಯ ತಾಯಿ ಸುಬ್ಬಮ್ಮ ರವರು ಗೊತ್ತು. ವಾದಿಯ ತಂದೆ ಗೊತ್ತಿಲ್ಲ. ಅವರಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ಅವರು ನಮ್ಮ ಹೊಸ ಆನಂದೂರು ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಹೌದು. ನಾನು ಖರೀದಿ ಮಾಡಿದ ಆಸ್ತಿ ಸರ್ವೆ ನಂಬರ್ ಜಮೀನು. ಅದರ ನಂಬರ್ ಗೊತ್ತಿಲ್ಲ. ಎಷ್ಟು ಎಕರೆ ವಿಸ್ತೀರ್ಣ ಖರೀದಿಸಿರುತ್ತೀರಾ ಎಂದರೆ ಸಾಕ್ಷಿಯು ಅಡಿಗಳ ಲೆಕ್ಕದಲ್ಲಿ ಖರೀದಿಸಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಎಷ್ಟು ವರ್ಷಗಳ ಹಿಂದೆ ಖರೀದಿಸಿರುತ್ತೇನೆ ಎಂದು ನೆನಪಿಲ್ಲ, 30 ವರ್ಷಗಳಾಗಿರಬಹುದು. ನಾನು ಖರೀದಿಸಿದ ಜಮೀನನ್ನು ಅಳತೆ ಮಾಡಿಸಿದ್ದೇನೆ. ಸದರಿ ಅಳತೆ ಮತ್ತು ದುರಸ್ತಿ ಮಾಡಿಸಿದ ಬಗ್ಗೆ ದಾಖಲೆ ಹಾಜರುಮಾಡಿದ್ದೇನೆ. ಸದರಿ ಆಸ್ತಿಯಲ್ಲಿ ಮನೆಯನ್ನು ಕಟ್ಟಿದ್ದೇನೆ. ಸದರಿ ಜಮೀನನ್ನು ಅನ್ಯಸಂಕ್ರಮಣ ಮಾಡಿಸಿಲ್ಲ , ಮನೆ ಕಟ್ಟಲು ಪರವಾನಿಗೆ ಪಡೆದಿಲ್ಲ. ನಾನು ಮನೆ ಕಟ್ಟಿ ಸುಮಾರು 30 ವರ್ಷವಾಗಿದೆ. ಅದರ ವಿಸ್ತೀರ್ಣ ಗೊತ್ತಿಲ್ಲ. ನಾನು ಕಟ್ಟಿರುವ ಮನೆಯ ದಕ್ಷಿಣಕ್ಕೆ ನನಗೆ ಸೇರಿದ ಮನೆ ಇದೆ, ಉತ್ತರಕ್ಕೆ ರಸ್ತೆ , ಪೂರ್ವಕ್ಕೆ ನನ್ನ ಮಗನಾದ ಅರುಣ್ ಕುಮಾರ್ ಸೇರಿದ

ಮನೆ , ಪಶ್ಚಿಮಕ್ಕೆ ಮಹದೇವಣ್ಣ ಮತ್ತು ಅವರ ತಂದೆಗೆ ಸೇರಿದ ಮನೆ ಇದೆ. ನನ್ನ ಮನೆಯ ಉತ್ತರಕ್ಕಾದಂತೆ ರಮೇಶ ಬಿನ್ ಕುಂಟೇಗೌಡ ರವರ ಆರ್.ಸಿಸಿ ಮನೆ ಇದೆ ಎಂದರೆ ಸರಿಯಲ್ಲ , ರಸ್ತೆ ಇದೆ. ಸದರಿ ಉತ್ತರ ದಿಕ್ಕಿಗೆ ರಮೇಶ್ ರವರಿಗೆ ಸೇರಿದ ಯಾವುದೇ ಮನೆ ಇಲ್ಲ. ಸಾಕ್ಷಿಯು ಮುಂದುವರೆದು ನಮಗೆ ಸೇರಿದ ಖಾಲಿ ಜಾಗದ ಸ್ವಲ್ಪ ಜಾಗದಲ್ಲಿ ರಮೇಶ್ ರವರು ಮನೆ ಕಟ್ಟಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಅವರು ಮನೆ ಕಟ್ಟುವಾಗ ನಾನು ದೂರು ನೀಡಿದ್ದೆನು. ಅವರು ಮನೆ ಕಟ್ಟಿ ಸುಮಾರು 2-3 ವರ್ಷವಾಗಿದೆ. ದೂರು ನೀಡಿದ ಬಗ್ಗೆ ದಾಖಲೆ ಹಾಜರುಮಾಡಿಲ್ಲ , ಅವರು ಗುಂಡಾಗಿರಿಯಿಂದ ಮನೆ ಕಟ್ಟಿದ್ದಾರೆ. ನನ್ನ ಮನೆಯ ಉತ್ತರ ದಿಕ್ಕಿಗೆ ವಾದಿಗೆ ಸೇರಿದ ಖಾಲಿ ನಿವೇಶನವಿದ್ದು ಆತನ ತಾಯಿ ಸುಬ್ಬಮ್ಮ ಮೇಲೆ ಹೇಳಿದ ರಮೇಶ ಬಿನ್ ಕುಂಟೇಗೌಡ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಮಾರಾಟದ ನಂತರ ರಮೇಶ್ ರವರು ಒಂದು ಆರ್.ಸಿಸಿ ಮನೆ ಕಟ್ಟಿ ಸುಮಾರು 15 ವರ್ಷವಾಗಿರುತ್ತದೆ ಎಂದರೆ ಸರಿಯಲ್ಲ. ರಮೇಶ್ ರವರು ಮನೆ ಕಟ್ಟಿ ಉಳಿದ ಪಶ್ಚಿಮ ದಿಕ್ಕಿನ ನಿವೇಶನವನ್ನು ವಾದಿ ಉಳಿಸಿಕೊಂಡಿರುತ್ತಾರೆ ಎಂದರೆ ಸುಳ್ಳು.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದರು ನೀಡಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ